ಡಿ-ಫ್ಲೋರೈಡ್ ಯೂನಿಟ್ ಸ್ಥಾಪನೆ

41(2923); ಶ್ರೀ ಸುಧಾಕರ್ ಲಾಲ್ ಪಿ.ಆರ್. (ಕೊರಟಗೆರೆ)

ಅ) ಕೊರಟಗೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಹಳ್ಳಿಗಳಲ್ಲಿ, ಫ್ಲೋರೈಡ್, ನೈಟ್ರೇಟ್ ಮತ್ತು ಆರ್ಸೆನಿಕ್ ಅಂಶಗಳು ಹೆಚ್ಚಾಗಿದ್ದು, ಕುಡಿಯುವ ನೀರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೊರಟಗೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕೊರಟಗೆರೆ ತಾಲ್ಲೂಕು, ತುಮಕೂರು ತಾಲ್ಲೂಕಿನ ಕೋರಾ ಹಾಗೂ ಮಧುಗಿರಿ ತಾಲ್ಲೂಕಿನ ಪುರವರ ಹೋಬಳಿಯಲ್ಲಿ ಈವರೆಗೆ ಶುದ್ಧ ಕುಡಿಯುವ ನೀರಿನ ಲಭ್ಯತೆಯ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ; ಹಾಗಿದ್ದಲ್ಲಿ, ಸಮೀಕ್ಷೆಯನ್ನು ಯಾರಿಂದ ನಡೆಸಲಾಗಿದೆ. (ಸಮೀಕ್ಷೆಯ ಪೂರ್ಣ ವರದಿ ನೀಡುವುದು);

ಇ) ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಈವರೆಗೆ ಕುಡಿಯುವ ನೀರಿನಲ್ಲಿ ಫ್ಲೋರೈಡ್, ನೈಟ್ರೇಟ್ ಮತ್ತು ಆರ್ಸೆನಿಕ್ ಅಂಶಗಳು ಹೆಚ್ಚಾಗಿದ್ದು ಕುಡಿಯಲು ನೀರು ಯೋಗ್ಯವಾಗಿಲ್ಲದ ಕೊಳವೆ ಬಾವಿಗಳಿರುವ ಗ್ರಾಮಗಳನ್ನು ಗುರುತಿಸಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಗ್ರಾಮಗಳನ್ನು ಗುರುತಿಸಲಾಗಿದೆ; ಆ ಗ್ರಾಮಗಳಲ್ಲಿ ನೀರಿನ ಪರೀಕ್ಷೆ ನಡೆಸಿರುವ ದಿನಾಂಕ ಮತ್ತು ಪರೀಕ್ಷೆಯ ವರದಿಯೊಂದಿಗೆ ಗ್ರಾಮಗಳ ಪೂರ್ಣ ವಿವರಗಳನ್ನು ಗ್ರಾಮ ಪಂಚಾಯಿತಿವಾರು ನೀಡುವುದು.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾ. ಅ. ಮತ್ತು ಪಂ. ರಾಜ್ ಸಚಿವರು)

ಅ) ಬಂದಿದೆ.

ಆ) ಜಿಲ್ಲಾ / ತಾಲ್ಲೂಕುಗಳಲ್ಲಿನ ನೀರು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಗ್ರಾಮೀಣ ಜನವಸತಿಗಳ ಜಲಮೂಲಗಳ ಗುಣಮಟ್ಟ ಪರೀಕ್ಷಿಸಿದೆ. ಪರೀಕ್ಷಾ ವರದಿಯನ್ನು ದಿನಾಂಕ: 31.12.2014ರಂತೆ ಸಮಗ್ರ ಮಾಹಿತಿ

ನಿರ್ವಹಣಾ ವ್ಯವಸ್ಥೆ (MIS)ಯಲ್ಲಿ ಸಾರ್ವಜನಿಕ ಮಾಹಿತಿಗಾಗಿ (www.indiawater.gov.in) ಮುಕ್ತವಾಗಿ ಪ್ರತಿಬಿಂಬಿಸಲಾಗಿದೆ. ಈ ಮಾಹಿತಿಯನ್ನು ಕಾಲಕಾಲಕ್ಕೆ ಪ್ರತಿ ವರ್ಷ ಇಂಧೀಕರಿಸಲಾಗುತ್ತಿದೆ.

ಇ) ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 385 ಜನವಸತಿಗಳ ಕೆಲವು ಜಲಮೂಲಗಳು ಅಧಿಕ ರಾಸಾಯನಿಕ ಕಲುಷಿತೆಯಿಂದ ಕೂಡಿರುತ್ತವೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

Karnataka Legislative Assembly

Shri Sudhakarlal. P.R.(Koratagere)

A) Has it come to the notice of government that there is excess Fluoride, Nitrate and Arsenic content in the habitations coming under the jurisdiction of Koraragere legislative assembly constituency and causing drinking water problem;

B) Whether any survery has been conducted regarding availability of safe drinking water in the Puravara hobli of Madhugiri taluk and Kora hobli of Tumkur taluk coming under the legislative assembly constituency of Koratagere; If so, who has conducted the survey;

C) Fluoride, Nitrate and Arsenic content are more in the Koratagere legislative assembly constituency. Whether non potability borewell habitations are identified; If so, how many habitations are identified. The GP-wise and village-wise details with the date of water quality testing and test reports be furnished?